**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**C.C. 380/2019**

**ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ-1**

ದಿಃ **25.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ಮಹಾಲಕ್ಷ್ಮಿ |
| **ತಂದೆ/ಗಂಡನ ಹೆಸರು** | ನರಸಿಂಹಯ್ಯ |
| **ವಯಸ್ಸು** | 40 ವರ್ಷ |
| **ಕೆಲಸ** | ವ್ಯವಸಾಯ |
| ವಾಸಸ್ಥಳ | ಗಾಗೇನಹಳ್ಳಿ |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ನ್ಯಾಯಾಲಯದಲ್ಲಿ ಹಾಜರಿರುವ **1** ಮತ್ತು **2** ನೇ ಆರೋಪಿತರನ್ನು ನೋಡಿ ಗುರುತಿಸಿದ್ದು ಅವರು ನನ್ನ ಸಂಬಂಧಿಕರು. ಚಾಸಾ **2** ಮತ್ತು **3** ರವರು ಗೊತ್ತು. ಅವರು ನನ್ನ ಸಂಬಂಧಿಕರು. ಸುಮಾರು **10** ವರ್ಷಗಳ ಹಿಂದೆ ನಾನು ಮನೆಯಲ್ಲಿದ್ದಾಗ ಬೆಳಗ್ಗೆ **4** ರಿಂದ **5** ಗಂಟೆ ಸಮಯದಲ್ಲಿ **1** ನೇ ಆರೋಪಿ ನಮ್ಮ ಮನೆಯ ಬಾಗಿಲನ್ನು ತಟ್ಟಿದರು. ಚಾಸಾ**2** ಮನೆಯ ಬಾಗಿಲನ್ನು ತೆಗೆದರು , ಆಗ ಆರೋಪಿತರು ನಮ್ಮ ಮನೆ ಇದು ಎಂದು ಹೇಳಿ ಜಗಳ ತೆಗೆದರು. ಚಾಸಾ**2** ರವರಿಗೆ ಬೆನ್ನಿನ ಮೇಲೆ ದೊಣ್ಣೆಯಿಂದ ಹೊಡೆದರು. ಚಾಸಾ**2** ರವರು ಕೂಗಿದಾಗ ನಾನು ಅಲ್ಲಿಗೆ ಹೋದೆ. **2** ನೇ ಆರೋಪಿ ನನಗೆ ಸೀಮೆಎಣ್ಣೆಯನ್ನು ಸುರಿದು ಬೆಂಕಿ ಹಚ್ಚಿದರು. ಚಾಸಾ**3** ರವರು ನಾನು ಕೂಗಿದ ಧ್ವನಿಯನ್ನು ಕೇಳಿ ಅಲ್ಲಿಗೆ ಬಂದು ನೀರು ಹಾಕಿ ಬೆಂಕಿಯನ್ನು ಆರಿಸಿದರು. ನನ್ನನ್ನು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಿಸಿದರು, ನಾನು ಅಲ್ಲಿಯೇ **2** ದಿನ ಚಿಕಿತ್ಸೆ ಪಡೆದೆನು. ನಂತರ ನಾನು ಬಿಳಿಕೆರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿದ್ದೇನೆ. ಸಾಕ್ಷಿಗೆ ದೂರನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-**1** ಎಂದು, ಸಾಕ್ಷಿಯ ಸಹಿಯನ್ನು ನಿಪಿ**1(ಎ)** ಎಂದು ಗುರುತಿಸಲಾಯಿತು.

ನಂತರ ಪೊಲೀಸರು ನಮ್ಮ ಮನೆಯ ಬಳಿ ಬಂದರು. ಅಲ್ಲಿ ಮಹಜರ್ ಕ್ರಮ ಜರುಗಿಸಿದರು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ**4** ಮತ್ತು **5** ರವರು ಇದ್ದರು. ಬೆಳಿಗ್ಗೆ **10** ರಿಂದ **10.30** ಗಂಟೆ ವರೆಗೆ ಪೊಲೀಸರು ಮಹಜರ್ ಜರುಗಿಸಿರುತ್ತಾರೆ. ಮಹಜರ್ ಜರುಗಿಸಿ ಪೊಲೀಸರು ಸ್ಥಳದಿಂದ

ಕಾಡುಜಾತಿಯ ದೊಣ್ಣೆ, ಪ್ಲಾಸ್ಟಿಕ್ ಕ್ಯಾನ್, ಸೀರೆ, ರವಿಕೆ ಮತ್ತು ಲಂಗ ಇವುಗಳನ್ನು ಅಮಾನತ್ತುಪಡಿಸಿಕೊಂಡರು. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಕಾಡುಜಾತಿಯ ದೊಣ್ಣೆಯನ್ನು ಮು ಮಾ **1,** ಪ್ಲಾಸ್ಟಿಕ್ ಕ್ಯಾನ್ ನ್ನು ಮು ಮಾ **2,** ಸೀರೆಯನ್ನು ಮು ಮಾ **3,** ರವಿಕೆಯನ್ನು ಮು ಮಾ **4** ಮತ್ತು ಲಂಗವನ್ನು ಮು ಮಾ **5** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಮಹಜರನ್ನು ನಿಪಿ**-2** ಎಂದು, ಸಾಕ್ಷಿಯ ಸಹಿಯನ್ನು ನಿಪಿ**2(**ಎ**)** ಎಂದು ಗುರುತಿಸಲಾಯಿತು. ಗುರುತಿಸಲಾಯಿತು. ನಾನು ಪೋಲೀಸರ ಮುಂದೆ ಮರುಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

ಪಾಟೀ ಸವಾಲು ಎಪಿಪಿರವರಿಂದಃ

ದಿಃ**05.12.2012** ರಂದು ಗಲಾಟೆ ನಡೆದಿರುತ್ತದೆ ಎಂದರೆ ಸರಿ. ನೀವು ಈ ಗಲಾಟೆ ವಿಚಾರವನ್ನು ಊರಿನ ಮುಖ್ಯಸ್ಥರಿಗೆ ತಿಳಿಸಿದಾಗ ಅಲ್ಲಿಯೇ ತೀರ್ಮಾನವಾಗಬಹುದು ಎಂದು ತಿಳಿದು, ಆದರೆ ಆರೋಪಿತರು ಪಂಚಾಯತಿಗೆ ಬರದ ಕಾರಣ ತಡವಾಗಿ ದೂರನ್ನು ನೀಡಿದ್ದೀರಿ ಎಂದರೆ ಸರಿ. ದಿಃ**19.12.2012** ರಂದು ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿದ್ದರು ಎಂದರೆ ಸರಿ. ನೀವು ನಿಮ್ಮ ಮರುಹೇಳಿಕೆಯಲ್ಲಿ " ಗೀತಾ ಹಾಗೂ ಪ್ರಭು ಇಬ್ಬರೂ ಸೇರಿ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ .................................... ಇಟ್ಟಿದ್ದ ದೀಪದ ಮೇಲೆ ನನ್ನ ಸೀರೆ ಸೆರಗು ಆಕಸ್ಮಿಕವಾಗಿ ಬಿದ್ದಿದ್ದರಿಂದ ಬೆಂಕಿ ಹತ್ತಿಕೊಂಡಿದೆ " ಎಂದು ಮರುಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಭಾಗವನ್ನು ನಿಪಿ**3** ಎಂದು ಗುರುತಿಸಲಾಯಿತು.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಸಮಯಾವಕಾಶ ಕೋರಿದ್ದು ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.